# ಶಿವಶರಣೆ ಅಕ್ಕಮಹಾದೇವಿ ವಚನಗಳಲ್ಲಿ ಕುಟುಂಬ

**ಶರಣಪ್ಪ ಆಡಕಾರ**

ಅತಿಥಿ ಉಪನ್ಯಾಸಕರು, ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ.

**DOI: https://doi.org/10.5281/zenodo.18776074**

## ABSTRACT:

12ನೆಯ ಶತಮಾನದ ವಚನ ಚಳುವಳಿಯೊಂದು ಸಮಾಜದ ಪಿತೃಪ್ರಧಾನ ಧೋರಣೆ, ಯಜಮಾನಿಕೆ, ಜಾತಿ–ಮತ ಮತ್ತು ಸಾಂಸಾರಿಕ ಬಿಗುದಾಣಗಳನ್ನು ಪ್ರಶ್ನಿಸಿದ ಆಧ್ಯಾತ್ಮಿಕ–ಸಾಮಾಜಿಕ ಪ್ರತಿರೋಧ ಚಳುವಳಿಯಾಗಿದೆ. ಇದರೊಳಗೆ ಶಿವಶರಣೆ ಅಕ್ಕಮಹಾದೇವಿಯ ವಚನಗಳು ಮಹಿಳೆಯ ಬದುಕಿನ ಸಂಕಟ, ವಿವಾಹದ ಬಂಧನ, ಕುಟುಂಬದ ಒತ್ತಾಯ ಮತ್ತು ಪುರುಷ ಪ್ರಧಾನ ಮೌಲ್ಯಗಳ ವಿರುದ್ಧದ ತಾತ್ವಿಕ ನಿಲುವನ್ನು ಬಲವಾಗಿ ಪ್ರತಿಧ್ವನಿಸುತ್ತವೆ. ಸಂಸಾರ ಮತ್ತು ಕುಟುಂಬದ ಪರಿಕಲ್ಪನೆಗಳನ್ನು ಕೇವಲ ಸಮಾಜದ ನಿರ್ಮಿತ ವ್ಯವಸ್ಥೆಯಾಗಿಯೇ ನೋಡಿದ ಅಕ್ಕ, ಲೌಕಿಕ ಗಂಡನನ್ನು ನಿರಾಕರಿಸಿ ಆಧ್ಯಾತ್ಮಿಕ ಗಂಡನಾದ ಚನ್ನಮಲ್ಲಿಕಾರ್ಜುನನನ್ನು ಅರಸುವ ಮೂಲಕ ಹೊಸ ಸ್ತ್ರೀ–ಆಧ್ಯಾತ್ಮಿಕತೆಗಾಗಿ ಮಾರ್ಗ ತೆರೆದಳು.

ಕುಟುಂಬವು ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣಕ್ಕೆ ಆಧಾರವಾದರೂ, ಪಿತೃಪ್ರಧಾನ ಸಂರಚನೆಯಲ್ಲಿ ಕುಟುಂಬವು ಸ್ತ್ರೀಯನ್ನು ಗೃಹಾಚಾರ, ಮಾತೃತ್ವ ಮತ್ತು ಗಂಡಸಾಧೀನ ಬದುಕಿಗೆ ಕುಗ್ಗಿಸುವ ಸಾಧನವಾಗುತ್ತದೆ. ಈ ಹಿನ್ನೆಲೆಯಲ್ಲಿ ‘ಈ ಸಾವ ಕೆಡುವ ಗಂಡರ ನೊಯ್ದು ಒಲೆಯೊಳಗಿಕ್ಕು’ ಎಂಬ ಆಕ್ರೋಶದ ವಚನಗಳ ಮೂಲಕ ಅಕ್ಕ ಸಾಮಾಜಿಕ–ಪುರುಷಾಧಿಪತ್ಯವನ್ನು ವಿರೋಧಿಸಿ ತನ್ನ ಸ್ವಾತಂತ್ರ್ಯ, ಆಧ್ಯಾತ್ಮಿಕ ಹಕ್ಕು ಮತ್ತು ಜೀವದ ಸ್ವಮೌಲ್ಯವನ್ನು ಪ್ರತಿಪಾದಿಸುತ್ತಾಳೆ.

ಅಕ್ಕಮಹಾದೇವಿಯ ವಚನಗಳು ಸಂಸಾರದ ವಿರುದ್ಧದ ಪರಿತ್ಯಾಗಮಾರ್ಗವನ್ನು ಮಾತ್ರವಲ್ಲ, ಮಹಿಳೆಯ ಸ್ವಯಂಪ್ರತಿಷ್ಠೆಗಾಗಿ ಕುಟುಂಬದ ಮಿತಿ ಮೀರುವ ಅಗತ್ಯವನ್ನೂ ಸಮರ್ಥಿಸುತ್ತವೆ. ಸಮಾಜವು ನಿಯೋಜಿಸಿದ ಕುಟುಂಬ–ವಿವಾಹ ಮಾದರಿಗಳಿಗೆ ಪರ್ಯಾಯವಾಗಿ ‘ನಿಶ್ಚಲ ಚೈತನ್ಯ’ವನ್ನು ಗಂಡನಾಗಿ ಕೊಂಡಾಡಿದ ಅಕ್ಕ, ಆಧ್ಯಾತ್ಮವನ್ನು ಸ್ವಾತಂತ್ರ್ಯದ ವೇದಿಕೆ ಮಾಡಿಕೊಂಡಳು. ಹೀಗಾಗಿ ಅಕ್ಕಮಹಾದೇವಿಯ ವಚನಗಳಲ್ಲಿ ಕುಟುಂಬವು ಕೇವಲ ಲೌಕಿಕ ಸಂಸ್ಥೆಯಲ್ಲ, ಆತ್ಮಸ್ವಾತಂತ್ರ್ಯ ಮತ್ತು ಮುಕ್ತಿಯ ನಡುವೆ ಅಡ್ಡವಾಗುವ ಸಂರಚನೆಯಾಗಿ ಕಾಣುತ್ತದೆ.

## KEYWORDS:

ವಚನ ಸಾಹಿತ್ಯ, ಕುಟುಂಬ ಪರಿಕಲ್ಪನೆ, ಪಿತೃಪ್ರಧಾನತೆ, ಸ್ತ್ರೀ ಪ್ರತಿರೋಧ, ಆಧ್ಯಾತ್ಮಿಕತೆ, ಸ್ತ್ರೀವಾದ ದೃಷ್ಟಿ, ಸಂಸಾರ, ಪರಿತ್ಯಾಗ.

12ನೆಯ ಶತಮಾನದ ವೇಳೆಗೆ ಸಮಾಜದಲ್ಲಿ ಅನೇಕ ರೀತಿಯ ಹೇರಿಕೆಗಳು ತಳಸಮುದಾಯ ಮತ್ತು ಮಹಿಳೆಯರ ಜೀವನವನ್ನು ಆಕ್ರಮಿಸಿದ್ದವು. ಇಲ್ಲಿ ಪುರೋಹಿತಶಾಹಿ ಮನಸ್ಥಿತಿಯ ಅಥವಾ ಪುರುಷ ಪ್ರಧಾನ ವ್ಯವಸ್ಥೆಯ ಮನಸ್ಥಿತಿಯು ಮಹಿಳೆಯನ್ನು ಇನ್ನಿಲ್ಲದಂತೆ ಕಾಡುತ್ತಿದ್ದವು. ಸಮಾಜವೆಂದರೆ ಸರ್ವರ ಏಳಿಗೆಗೆ ವೇದಿಕೆಯಾಗಬೇಕಾದ ಮಟ್ಟದಿಂದ ಕೆಲವರ ಏಳಿಗೆಗೆ ಅನೇಕರು ಶ್ರಮಿಸುವ ಸ್ಥಿತಿಗೆ ಬಂದು ತಲುಪಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಬಸವಾದಿ ಪ್ರಮಥರ ಆದಿಯಾಗಿ 33 ವಚನಕಾರ್ತಿಯರು ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯ ಮೇಲಾಗುತ್ತಿದ್ದ ಅನ್ಯಾಯ, ಶೋಷಣೆಯನ್ನು ಹೋಗಲಾಡಿಸಲು ತಮ್ಮ ವಿಚಾರಗಳ ಮೂಲಕ ಪ್ರತಿರೋಧವನ್ನು ಒಡ್ಡಿದ್ದರು. ಈ ಪ್ರತಿರೋಧವು ಪೂರ್ವನಿರ್ಧರಿತವಾಗಿದ್ದ ಅದರಲ್ಲೂ ಕೇವಲ ಪುರುಷ ದೃಷ್ಟಿಯಿಂದ ಮುನ್ನೆಡೆದುಕೊಂಡು ಬರುತ್ತಿದ್ದ ಕುಟುಂಬ ವ್ಯವಸ್ಥೆ, ವಿವಾಹದ ಪರಿಕಲ್ಪನೆ, ಜಾತಿ ವ್ಯವಸ್ಥೆ ಹೀಗೆ ವಿವಿಧ ಅಂಶಗಳಲ್ಲಿ ಕಂಡುಬರುವ ಸಮತಾ ಸಮಾಜದ ವಿರೋಧಿ ನೆಲೆಗಳನ್ನು ತಮ್ಮ ವಚನಗಳ ಮೂಲಕ ವಿರೋಧಿಸುವ ಹಿನ್ನೆಲೆಯಲ್ಲಿ ಈ ಲೇಖನ ವಿಸ್ತಾರ ಪಡೆದುಕೊಂಡಿದೆ. ಅದರಲ್ಲೂ ಅಕ್ಕಮಹಾದೇವಿಯವರ ವಚನಗಳು ಕೇಂದ್ರವಾಗಿ ವಿಷಯದ ಚರ್ಚೆಯಾಗಿದೆ.

ಸಾಮಾಜಿಕ ಪ್ರತಿರೋಧವೆಂಬುದು ಮಾನವ ಬದುಕಿನ ಪ್ರತಿ ಕ್ಷೇತ್ರವನ್ನು ವಿಡಂಬನೆಗೆ ಗುರಿ ಮಾಡುತ್ತದೆ. ವಚನ ಚಳುವಳಿಯ ಸಂದರ್ಭಕ್ಕೆ ಇಂತಹ ಪ್ರತಿರೋಧವು ಸಮಾಜದ ಶುದ್ಧಿಕರಣ, ಜನರಲ್ಲಿನ ಮೌಢ್ಯವನ್ನು ಹೊಡೆದು ಹಾಕುವ ಸದುದ್ದೇಶವನ್ನು ಹೊಂದಿತ್ತು. ಹೀಗೆ “ಜನರಲ್ಲಿ ರೂಢಮೂಲವಾದ ನಂಬಿಕೆಗಳು ಎಷ್ಟೋ ವೇಳೆ ಮಾತು ಕೃತಿಗಳಲ್ಲಿ ಅಸಾಂಗತ್ಯವನ್ನುಂಟು ಮಾಡುತ್ತವೆ. ಜನರ ಮುಗ್ಧತೆ ಹಾಗೂ ಮೌಢ್ಯಗಳು ಎಷ್ಟೆಂದರೆ ತಮ್ಮ ಎಷ್ಟೋ ನಡತೆಗಳು ತಮ್ಮ ಮನೋಭಾವಕ್ಕೆ ವಿರುದ್ಧವಾಗಿರುವುದನ್ನೇ ಅವರು ಗುರುತಿಸಲಾರರು. ಇಂತಹ ಸಂದರ್ಭಗಳಲ್ಲಿ ವಚನಕಾರರು ತಮ್ಮ ವ್ಯಂಗ್ಯದ ಮಾತಿನಿಂದ ಚುಚ್ಚುತ್ತಾರೆ.” ವಚನ ಚಳುವಳಿ ವಿಡಂಬನೆ, ವ್ಯಂಗ್ಯ, ರೂಪಕಗಳ ಮೂಲಕವಾಗಿ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕಾರ್ಯದ ಕಡೆಗೆ ಪ್ರವೃತ್ತರಾದರು. ಈ ಹಿನ್ನೆಲೆಯಲ್ಲಿ ನಡೆದಂತೆ ನುಡಿದರು, ನುಡಿದಂತೆ ನಡೆದರು.

ಕುಟುಂಬವೆಂಬುವುದು ಸಮಾಜದ ಒಂದು ಮುಖ್ಯವಾದ ಘಟಕ. ಮಾನವ ಸಮಾಜ ಜೀವನಕ್ಕೆ ಒಂದು ವೇದಿಕೆಯೂ ಹೌದು. ವ್ಯಕ್ತಿಯ ಸರ್ವತೋಮುಖ ವ್ಯಕ್ತಿತ್ವದ ಬೆಳವಣಿಗೆಗೆ ಕುಟುಂಬ ಸಹಕಾರ ನೀಡುತ್ತದೆ. ಮಾನವನ ಸಹಬಾಳ್ವೆಯು ಇಲ್ಲಿಂದಲ್ಲೇ ಮೊದಲಗೊಳ್ಳುತ್ತದೆ. ಮಾನವನ ವಿಕಾಸದ ಮೊದಲ ಹಂತದಲ್ಲಿ ಕುಟುಂಬ ವ್ಯವಸ್ಥೆಯು ಕಂಡು ಬರುವುದಿಲ್ಲ. ಅವನು ಒಂದೆಡೆಗೆ ನೆಲೆನಿಂತ ಮೇಲೆ ಕುಟುಂಬದ ಪರಿಕಲ್ಪನೆ ಜನ್ಮ ತಾಳುತ್ತದೆ. ಅಲ್ಲಿಂದ ಈ ವರೆಗೂ ಕುಟುಂಬವೂ ಮಾನವ ಜೀವನಕ್ಕೆ ಮೂಲ ನೆಲೆಯಾಗುತ್ತಾ ಬಂದಿದೆ.

ಹನ್ನೆರಡನೆಯ ಶತಮಾನದ ಶಿವಶರಣರು ಮತ್ತು ಶರಣೆಯರು ಕೌಟುಂಬಿಕ ಬದುಕನ್ನು ಗೌರವದಿಂದಲೇ ಕಂಡರು ಎನ್ನುವುದಕ್ಕೆ ಹಲವಾರು ವಚನಗಳು ಸಾಕ್ಷಿಯಾಗಿ ನಿಲ್ಲುತ್ತವೆ. "ಸಂಸಾರದಲ್ಲಿದ್ದು ಪವಿತ್ರವಾದ ಜೀವನ ನಡೆಸುತ್ತಾ, ಪುರುಷಾರ್ಥ ಸಾಧನೆ ಮಾಡಿಕೊಳ್ಳಬಹುದೆಂಬುದನ್ನು ಅವರು ತೋರಿಸಿರುವರು. ಸಾಂಸಾರಿಕ ಜೀವನ, ಆಧ್ಯಾತ್ಮಿಕ ಜೀವನಕ್ಕೆ ಎಂದೂ ಅಡ್ಡ ಬರುವುದಿಲ್ಲ. ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯುವವರಿಗೆ 'ಮಾಯೆ'ಯಾಗಿ ಕಾಡುವುದು ವ್ಯಕ್ತಿಯಲ್ಲ, ವಸ್ತುವಲ್ಲ. ಅದರ ಮೇಲಿನ ವ್ಯಾಮೋಹವೇ ಕಾರಣವಾಗಿದೆ ಎಂಬ ಸತ್ಯದ ಮೇಲೆ ಬೆಳಕು ಚೆಲ್ಲಿರುವರು." ಈ ಮಾತಿಗೆ ಅಕ್ಕಮಹಾದೇವಿಯ ವಿಚಾರಗಳು ಭಿನ್ನವಾಗುತ್ತವೆ. 'ಈ ಸಾವ ಕೆಡುವ ಗಂಡರ ನೊಯ್ದು ಒಲೆಯೊಳಗಿಕ್ಕು' ಎಂಬ ನೇರ ನುಡಿಯನ್ನು ಆಡುತ್ತಾಳೆ. ಇಲ್ಲಿ ಲೌಕಿಕ ಗಂಡನನ್ನು ನಿರಾಕರಿಸಿ, ಆಧ್ಯಾತ್ಮಿಕ ನಿರಾಕಾರ ಗಂಡನ ಅರಸುತ್ತಾ ಕೊನೆಗೆ ಚನ್ನಮಲ್ಲಿಕಾರ್ಜುನನಲ್ಲಿ ಒಂದಾಗುವ ಪರಿಯಲ್ಲಿಯೇ ಅಕ್ಕಮಹಾದೇವಿಯ ಸಾರ್ಥಕ ಬದುಕು ತೋರಪಡುತ್ತದೆ.

ವಚನ ಚಳುವಳಿಯ ಪೂರ್ವ ಭಾರತದಲ್ಲಿ ಕುಟುಂಬವೆಂಬ ಪರಿಕಲ್ಪನೆಯ ದೃಷ್ಟಿಕೋನವು ಕೇವಲ ಪುರುಷ ಹಿನ್ನೆಲೆಯದಾಗಿತ್ತು. ಆದರೆ ವಚನಕಾರರ ವಿಚಾರ ದೃಷ್ಟಿಯಿಂದ ಕುಟುಂಬವೆಂದರೆ ಸ್ತ್ರೀ-ಪುರುಷರಿಬ್ಬರ ಪ್ರಾಮುಖ್ಯತೆಯನ್ನು ಅಪೇಕ್ಷಿಸುವಂತಹದು ಎಂಬ ಸಮಾನತೆಯ ದಾಟಿಯನ್ನು ಹೊರ ಹಾಕಿದರು. ಮಾನವನ ಸರ್ವವು ಕುಟುಂಬವೇ ಆಗಿರುವಾಗ ಅಲ್ಲಿ ಸಮಾನತೆ, ಸಹಬಾಳ್ವೆ ನೆಲೆಯಾಗಬೇಕು ಎಂಬ ಸತ್ಯವನ್ನು ವಚನಕಾರರು ಕಂಡುಕೊಂಡು ಅದರಂತೆಯೇ ಬದುಕಬೇಕೆಂಬ ನುಡಿಯನ್ನು ಪ್ರತಿಧ್ವನಿಸಿದರು. ಕುಟುಂಬದ ವಿಚಾರದಲ್ಲಿ ಪೂರ್ವ ನಿರ್ಧರಿತ ವಿಷಯವನ್ನು ಹಿಂದಕ್ಕೆ ತಳ್ಳಿ ಲಿಂಗ ತಾರತಮ್ಯತೆಯನ್ನು ತೊಡೆದು ಹಾಕುವ ಮೂಲಕವೇ ಕುಟುಂಬದ ಮಹತ್ವವನ್ನು ಸಾರಿದರು.

"ಪಿತೃಪ್ರಧಾನ ಯಜಮಾನ ಸಂಸ್ಕೃತಿಯ ನೆರಳಲ್ಲಿ ಬದುಕುತ್ತಿರುವ ಕಾಲದಲ್ಲಿದ್ದುಕೊಂಡು ಅದೆಲ್ಲವನ್ನು ಹೊಡೆದು ಹಾಕಿ ಯಾರೂ ಒಡೆಯನೂ ಅಲ್ಲ, ಆಳೂ ಅಲ್ಲ. ಎಲ್ಲರೂ ಸಮಾನರು ನಮ್ಮೆಲ್ಲರ ಒಡೆಯ ನಮ್ಮಂಗದ ಮೇಲಿನ ಇಷ್ಟಲಿಂಗ ಎಂಬ ವಿಶಾಲತೆಯ ಕೊಡುವ ಮೂಲಕ ಯಜಮಾನ ಸಂಸ್ಕೃತಿಯ ಬೇರನೂ ಅಲುಗಾಡಿಸಿ ಏಕನಿಷ್ಠೆಯನ್ನು ಏಕಕಾಲಕ್ಕೆ ಲಿಂಗಕ್ಕೆ, ಬದುಕಿಗೆ ತಂದುಕೊಟ್ಟ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ." ಪಿತೃಪ್ರಧಾನ ಕುಟುಂಬ ವ್ಯವಸ್ಥೆಯ ಅನೇಕ ಅನಿಷ್ಟ ಪದ್ಧತಿಗೆ ಬೆಂಕಿಯನ್ನಿಟ್ಟು ಅದರ ಬೆಳಕಿನಲ್ಲಿ ಸರ್ವ ಜನಾಂಗದ ಉದ್ಧಾರದ ಕಂದೀಲನ್ನು ಹಚ್ಚಿ ಇಟ್ಟವರು ಬಸವಣ್ಣನವರು. ಇವರ ಆದರ್ಶ ಬದುಕೇ ಒಂದು ಮಾದರಿ ಕುಟುಂಬ, ಮನುಷ್ಯನ ಉನ್ನತೀಕರಣಕ್ಕೆ ಮೆಟ್ಟಿಲಾಗುವುದೇ ವಿನಹ ಅದು ಅಡೆತಡೆಯಾಗಲಾರದು ಎಂಬ ಸತ್ಯವು ಬಸವಣ್ಣನವರ ಜೀವನ ಚಿತ್ರಕ್ಕೆ ಸಾಕ್ಷಿಯಾಗುತ್ತದೆ.

ಸಮಾಜದ ಭಾಗವಾದ ಕುಟುಂಬ, ಅದರಡಿಯಲ್ಲಿ ಬರುವ ವಿವಾಹವೆಂಬ

ಸಂಸ್ಥೆಯ ವಿರುದ್ಧ ಪ್ರತಿರೋಧವನ್ನೊಡ್ಡಿದ ಅಕ್ಕಮಹಾದೇವಿಯು ಹೆಣ್ಣಿನ ವ್ಯಕ್ತಿತ್ವವನ್ನು ನಾಲ್ಕು ಗೋಡೆಗಳ ಮಧ್ಯದಲ್ಲಿ ಕಮರುವಂತೆ ಮಾಡುವ ವಿವಾಹದ ಪರಿಕಲ್ಪನೆಯನ್ನು, ಗಂಡನೆಂಬ ಕ್ರೂರ ಮನಸ್ಥಿತಿಯನ್ನು ನೇರವಾಗಿಯೇ ವಿರೋಧಿಸುತ್ತಾಳೆ. ಲೌಕಿಕ ಸಂಸಾರದ ಹಗೆಯಿಂದ ಬಿಡಿಸಿಕೊಂಡು, ಆಧ್ಯಾತ್ಮಿಕ ಸಂಸಾರ, ಗಂಡನನ್ನು ಅರಸುತ್ತಾ ಚನ್ನಮಲ್ಲಿಕಾರ್ಜುನನಲ್ಲಿ ಲೀನವಾಗುವ ಪರಿ ವಿಶಿಷ್ಟವಾಗಿ ಕಾಣುತ್ತದೆ. ಅಕ್ಕನ ವಚನಗಳಲ್ಲಿ ತೋರುವ ಪ್ರತಿರೋಧ ಪುರುಷ ಪ್ರಧಾನ ಯಜಮಾನಿಕೆಯ ಧೋರಣೆಗಳನ್ನು ಹೆಡೆಮುರಿ ಕಟ್ಟಿ ತುರುವ ನಿಷ್ಠುರತೆಯು ಸಮಾಜವನ್ನು ಹೆಚ್ಚು ಶುದ್ಧಿಕರಿಸುತ್ತದೆ. ಅದರಲ್ಲಿ ಸ್ತ್ರೀಯ ಬದುಕಿಗೆ ಅನೇಕ ಅನಿಷ್ಟ ಪದ್ಧತಿ ಎಲೆಮೀರಿ ಬದುಕು ಸಾಗಿಸುವ ಅವಳ ಪರಿಯು ಇಡೀ ಸ್ತ್ರೀಕುಲಕ್ಕೆ ದಾರಿದೀಪವಾಗಿ ಕಾಣುತ್ತದೆ. ಅವಳ ವಚನದ ದೃಷ್ಟಿಯು ಸಾವಿಗೆ ಅಂಜುವ ಗಂಡನಿಂದ ದೂರ ಸರಿಯುವುದು, ಅದರ ಹಿನ್ನೆಲೆಯಲ್ಲಿ ಅನೇಕ ವಚನಗಳು ಸಮಾಜವನ್ನು ವಿಡಂಬಿಸುತ್ತದೆ.

ಅಕ್ಕನ ವಚನ ಮತ್ತು ವಿಚಾರಗಳ ದೃಷ್ಟಿಯಲ್ಲಿ ಕುಟುಂಬದ ಪರಿಕಲ್ಪನೆ ಬೇರೆ ವಚನಕಾರ್ತಿಯರಿಗಿಂತ ಭಿನ್ನವಾಗಿ ಪ್ರಕಟಗೊಳ್ಳುತ್ತದೆ. ಅಕ್ಕನಷ್ಟೇ ಕುಟುಂಬ ಪರಿಕಲ್ಪನೆಯನ್ನು ಒಪ್ಪದ ವಿರಾಗಿಣಿಯರಾಗಿ ನಡೆದುಕೊಂಡ ಮುಕ್ತಾಯಕ್ಕ, ಬೊಂತಾದೇವಿ, ಅಕ್ಕಮ್ಮ, ಗೊಗ್ಗವ್ವೆ ಇತ್ಯಾದಿ ವಚನಕಾರ್ತಿಯರು ತಮ್ಮ ನಿಷ್ಠುರ ನಿಲುವು ಹೆಚ್ಚು ಒಲವನ್ನು ತೋರಿದರು.

**ನಾ ಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು**
**ಸಂಸಾರ ಹುಟ್ಟಿದಲ್ಲಿ ಅಜ್ಞಾನ ಹುಟ್ಟಿತ್ತು**
**ಅಜ್ಞಾನ ಹುಟ್ಟಿದಲ್ಲಿ ಆಸೆ ಹುಟ್ಟಿತ್ತು**
**ಆಸೆ ಹುಟ್ಟಿದಲ್ಲಿ ಕೋಪ ಹುಟ್ಟಿತ್ತು**
**ಆ ಕೋಪಾಗ್ನಿಯ ತಾಮಸ ಧೂಮ್ರ ಮುಸುಕಿದಲ್ಲಿ**
**ನಾನಿಪ್ಪ ಮರೆದು ಭವದ ದುಃಖಕ್ಕೆ ಈಡಾದೆ**
**ನೀ ಕರುಣದಿಂದೆತ್ತೆ ಎನ್ನ ಮರಹ ವಿಂಗಡಿಸಿ**
**ನಿಮ್ಮ ಪಾದವ ಅರುಹಿಸಯ್ಯ ಚೆನ್ನಮಲ್ಲಿಕಾರ್ಜುನ**
**(ಸಮಗ್ರ ವಚನ ಸಂಪುಟ–5, ವಚನ ಸಂಖ್ಯೆ–256.)**

ಅಕ್ಕನ ವಿಚಾರದಲ್ಲಿ ಸಂಸಾರ ಅಥವಾ ಕುಟುಂಬವು ವ್ಯಕ್ತಿಗತ ಉನ್ನತಿಗೆ ಅಡೆತಡೆ ಮಾಡುತ್ತದೆ ಎಂಬ ಹಿನ್ನೆಲೆಯಲ್ಲಿಯೇ ಲೌಕಿಕ ಗಂಡನನ್ನು ತೊರೆದು ಆಧ್ಯಾತ್ಮದ ಗಂಡನಾದ ಚನ್ನಮಲ್ಲಿಕಾರ್ಜುನನಲ್ಲಿ ಅನುರಕ್ತಳಾಗಿದ್ದಳು. ಈ ಪರಿಯ ಅನುರಕ್ತವನ್ನು ಸದಾ ತನ್ನ ವಚನದ ಮುಖ್ಯ ಭೂಮಿಕೆಯಾಗಿಸಿಕೊಂಡು ತನ್ನ ವಿಚಾರಗಳನ್ನು ಮಂಡಿಸಿದ್ದಾಳೆ.

"ಕುಟುಂಬದ ಕಲ್ಪನೆ ತಾ ಹುಟ್ಟಿದ ಮೇಲೆ ಹುಟ್ಟಿದಂಥದ್ದು ತನಗಿಂತ ಮೊದಲು ಬಂದಿದ್ದಲ್ಲಿ ಆಧ್ಯಾತ್ಮದ ಹಾದಿಗೆ ಬೇಕೇ ಹೊರತು ಪೂರ್ವ ನಿರ್ಮಿತವಲ್ಲ. ಆಸೆ, ಕೋಪ, ನಿರೀಕ್ಷೆಗಳು ಭವದ ದುಃಖಕ್ಕೆ ಕಾರಣ. ಮನುಜ ಮೇಲೇರಬೇಕಾದರೆ ದೈವದ ಸಾನ್ನಿಧ್ಯಬೇಕು." ಇಲ್ಲಿ ಅಕ್ಕಮಹಾದೇವಿ ಮಾನವನ ಹುಟ್ಟು ವಿಕಾಸದ

ಪರಂಪರೆಯ ಮೂಲವನ್ನು ವ್ಯಕ್ತಪಡಿಸುತ್ತಾ ಸಂಸಾರವೆಂಬುದು ಜಟಿಲವಾದದು ಅದನ್ನು ಆಶ್ರಯಿಸಿದರೇ ಸದಾ ಲೌಕಿಕ ತಾಕಲಾಟಗಳಿಗೆ ಎದುರಾಗಬೇಕಾಗುತ್ತದೆ. ಅದಕ್ಕೆ ಆಧ್ಯಾತ್ಮದ ಹಾದಿಗೆ ಸಾಗಿ ವ್ಯಕ್ತಿತ್ವದ ಉನ್ನತೀಕರಣ ಮಾಡಿಕೊಳ್ಳಬೇಕೆಂಬ ಅರ್ಥವನ್ನು ಪ್ರಸ್ತುತಪಡಿಸುತ್ತಾಳೆ. ಇಲ್ಲಿ ಉಳಿದ ವಚನಕಾರ್ತಿಯರಿಗಿಂತ ಒಂದು ಹೆಜ್ಜೆ ಮುಂದೆ ಇರಿಸಿ ಲೌಕಿಕ ಸಂಸಾರದ ಬೆನ್ನು ಹತ್ತದೆ ಆಧ್ಯಾತ್ಮದ ಸಂಸಾರದ ಕಡೆಗೆ ಒಲವು ತೋರುವ ದೃಢ ನಿಶ್ಚಯವನ್ನು ತೋರುವುದು ವಚನಕಾರರ ಕಾಲಘಟ್ಟಕ್ಕೆ ಅಕ್ಕಮಹಾದೇವಿಯಂತಹ ವ್ಯಕ್ತಿತ್ವ ಇಡೀ ಪುರುಷ ಸಮಾಜ ವಿರುದ್ಧ ನಿಶ್ಚಲವಾಗಿ ನಿಲ್ಲುತ್ತದೆ.

ಅಕ್ಕಮಹಾದೇವಿಯ ಸಂಸಾರದ ಚಿತ್ರಣದಲ್ಲಿ ಗಂಡ, ಹೆಂಡತಿ, ಮಕ್ಕಳು ಎಂಬ ವಿವಿಧ ಸಂಬಂಧಗಳ ಮೂರ್ತ ಸ್ವರೂಪಕ್ಕೆ ಹೆಚ್ಚು ಮನ್ನಣೆಯಿಲ್ಲ. ಅವಳ ಶಿವಭಕ್ತಿಯ ತೀವ್ರತೆಯಿಂದಲೇ ಚೆನ್ನಮಲ್ಲಿಕಾರ್ಜುನನ್ನೇ ಗಂಡನನ್ನಾಗಿಸಿಕೊಳ್ಳುವಷ್ಟು ಲೌಕಿಕ ಬದುಕಿನಿಂದ ಬೇಸತ್ತಿದ್ದಳು. ಇದೇ ಹಿನ್ನೆಲೆಯಲ್ಲಿ ಚೆನ್ನಮಲ್ಲಿಕಾರ್ಜುನನ ರೂಪು ಲಾವಣ್ಯಕ್ಕೆ ಮನಸೋತ ಅಕ್ಕ ತನ್ನ ಮನದ ಸಹಜ ಬಯಕೆಯನ್ನು ವ್ಯಕ್ತಪಡಿಸುವ ರೀತಿ ವಿಶೇಷವಾಗಿದೆ. ಉತ್ತರ ಭಾರತದ ಮೀರಾಳ ಕೃಷ್ಣ ಭಕ್ತಿಗಿಂತ ಭಿನ್ನವಾದ ಪರಿಯಾಗಿ ತೋರುತ್ತದೆ.

**ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ !**
**ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ**
**ಚೆಲುವಂಗಾನೊಲಿದೆನವ್ವ !**
**ಭವವಿಲ್ಲದ ಭಯವಿಲ್ಲದ ನಿಸ್ಸೀಮ ಚೆಲುವಂಗಾನೊಲಿದೆ**
**ಇದು ಕಾರಣ ಚೆನ್ನಮಲ್ಲಿಕಾರ್ಜುನ ಗಂಡನೆನಗೆ**
**ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ!**
**(ಸಮಗ್ರ ವಚನ ಸಂಪುಟ–05, ವಚನದ ಸಂಖ್ಯೆ–398)**

ಅಕ್ಕನು ಚೆನ್ನಮಲ್ಲಿಕಾರ್ಜುನ ಅರಸುತ್ತಾ, ಲೌಕಿಕ ಬದುಕಿನ ಸಂಬಂಧವನ್ನು ತೊರೆದು ಬದುಕು ನಡೆಸಿದಾಕಿ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯ ಮೇಲೆ ಹೇರಲಾದ ಕುಟುಂಬ ಜವಾಬ್ದಾರಿ ಹಾಗೂ ಮಗುವಿನ ಲಾಲನೆ ಪಾಲನೆ ಮಾರ್ಗ ತೋರಿ ಸದಾ ಅವಳನ್ನು ಕಾರ್ಯಗತ ಮಾಡಿದ ಪರಿಯನ್ನು ಪ್ರತಿಭಟಿಸುವ ನೆಲೆಯಲ್ಲಿಯೇ 'ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ' ಎಂದು ದೃಢ ನಿರ್ಧಾರಕ್ಕೆ ಬದ್ಧಳಾಗುತ್ತಾಳೆ.

"ಮನುಷ್ಯನಿಗೆ ಕಷ್ಟ ಅಡೆತಡೆ ಭಯ ಹಾನಿ ಇವುಗಳು ಆವರಿಸಿ ಬದುಕು ತೊಡಕಾಗುವುದು. ಇವುಗಳಿಲ್ಲದ ನಿರಾಕಾರ ನಿರುಪಮ ನಿಸ್ಸೀಮನಾದ ಮೃತ್ಯುಂಜಯ (ಚೆನ್ನಮಲ್ಲಿಕಾರ್ಜುನ) ಗಂಡನೆಂದು ಆತನಿಗೆ ಈ ತನುವನ್ನು ಅರ್ಪಿಸಿರುವೆನು ಎನ್ನುತ್ತಾಳೆ. ಲೌಕಿಕದ ಜನನ ಮರಣದ ಭವಿಗಳು ದುಃಖಿತರು ಹೀಗಾಗಿ ಸಾವ ಕೊಡುವ ಗಂಡನನ್ನು ಒಯ್ದು ಒಲೆಯೊಳಗಿಕ್ಕು ಎಂದು ಅಭಿಪ್ರಾಯಪಡುತ್ತಾಳೆ." ಒಂದರ್ಥದಲ್ಲಿ ಈ ಅಭಿಪ್ರಾಯ ಶತಶತಮಾನಗಳಿಂದ ಸಮಾಜ ಮುಂದುವರೆಸಿಕೊಂಡು

ಬಂದ ಕಟ್ಟಳೆಗಳ ಎಲೆ ಮೀರಿ ಸಮಾನತೆಯ ಛಾಟಿ ಬೀಸಿದ ವಚನಕಾರ್ತಿ ಅಕ್ಕಮಹಾದೇವಿ ಮೊದಲ ಸ್ತ್ರೀವಾದಿಯಾಗಿ ಅವಳು ತೆಗೆದುಕೊಂಡ ಪ್ರತಿ ನಿರ್ಧಾರಗಳು ಗಂಡು ಮನಸ್ಥಿತಿಗೆ ಬರೆ ಎಳೆದಂತೆಯಾಯಿತು.

ಚೆನ್ನಮಲ್ಲಿಕಾರ್ಜುನನು ಶೋಧಿಸುವ ಪರಿಯಲ್ಲಿ ಮಾನವನ ಬದುಕಿಗೆ ಅಡ್ಡಗೋಡೆಯಂತಿದ್ದ ಸಂಸಾರ, ಗಂಡ, ಸಂಬಂಧಗಳೆಲ್ಲವನ್ನು ಗಾಳಿಗೆ ತೂರಿ ವಿಭಿನ್ನವಾದ ಮಾರ್ಗದಲ್ಲಿ ನಡೆದು ಕದಳಿಗರ್ಭದಲ್ಲಿ ಲೀನವಾದಳು. ಅಕ್ಕನ ರಚನೆಯಲ್ಲಿ ಸದಾ ಸಮಾಜದ ಅಸಮಾನತೆ, ಕಟ್ಟಳೆಗಳ ಮುದ್ರೆ ಒಡೆದು ಸ್ವತಂತ್ರ ಬದುಕನು ನಡೆಸುವ ದಿಟ್ಟ ನಿರ್ಧಾರ ಪ್ರಜ್ವಲಿಸುತ್ತದೆ. ಇವಳ ಹಾದಿಯಲ್ಲಿ ಅನೇಕ ವಚನಕಾರ್ತಿಯರು ನಡೆದರು ಅದರಲ್ಲಿ ಕೆಲವರು ಸಂಸಾರ ಅಥವಾ ಕುಟುಂಬದ ಬಂಧದಲ್ಲಿದ್ದೆ ಮೋಕ್ಷದ ಹಾದಿ ತುಳಿದರು.

ಭಾರತದಲ್ಲಿ ಕುಟುಂಬ ಪದ್ಧತಿಯು ಪಿತೃಪ್ರಧಾನವಾದರಿಂದ ಅಲ್ಲಿ ಮಹಿಳೆಯ ಇರುವಿಕೆ ಇದ್ದು ಇಲ್ಲದಂತೆ ತೋರುತ್ತದೆ. “ಕೌಟುಂಬಿಕ ಸ್ವಾಮಿತ್ವ ಅಥವಾ ಯಜಮಾನ್ಯವನ್ನು ನಿರ್ವಹಿಸುವ ಪುರುಷ ನೆಲೆಯನ್ನು ಧರ್ಮಗಳು ಒಪ್ಪಿಕೊಂಡಿದ್ದರಿಂದ ಪಿತೃಪ್ರಧಾನ ವ್ಯವಸ್ಥೆ ಗಟ್ಟಿಗೊಂಡು ಸ್ತ್ರೀಯನ್ನು ಪರಿಧಿಗೆ ಸರಿಸಿತು. ಹೀಗೆ ಧರ್ಮ ಮತ್ತು ಪಿತೃಪ್ರಧಾನತೆಗಳ ಜಂಟಿ ಪ್ರತಿಪಾದನೆಯಿಂದ ಸ್ತ್ರೀಯು ಗೃಹಬಂಧಿಯಾಗಿ ಗೃಹಿಣಿ ಅಸ್ತಿತ್ವವನ್ನು ‘ತಾಯ್ತನದ’ ಹೊಣೆಗಾರಿಕೆಯನ್ನು ಒಪ್ಪಿಕೊಂಡು ಬದುಕಬೇಕಾಯಿತು. ಇದನ್ನು ಮೀರಿ ಹೊರ ಬಂದರೆ ಇದಕ್ಕಿಂತಲೂ ಘೋರವಾದ ಅಮಾನವೀಯವಾದ (ಕೌಟುಂಬಿಕೇತರ ವ್ಯವಸ್ಥೆಯಲ್ಲಿ ಹೆಣ್ಣಿನ ಬದುಕಿನ ಸ್ವರೂಪ) ರೀತಿಯಲ್ಲಿ ಬದುಕು ಇರುವುದರಿಂದ ಕನಿಷ್ಠ ಸೌಲಭ್ಯ ರಕ್ಷಣೆಗಳಾದರೂ ದೊರಕುವ ಕಾರಣಕ್ಕಾಗಿ ‘ಕುಟುಂಬ’ ವ್ಯವಸ್ಥೆಯನ್ನೇ ಅವಲಂಬಿಸಿ, ಪುರುಷಾಧೀನ ಬದುಕನ್ನೇ ಸ್ವೀಕರಿಸುವ (ದೀಪದ ಹುಳುವಿನಂತೆ) ಅನಿವಾರ್ಯ ಸ್ಥಿತಿಗೆ ಮಹಿಳೆಯರು ಬರಬೇಕಾಯಿತು.” ಈ ಯಜಮಾನಿಕೆಯಿಂದ ಬೇಸತ್ತು ಅಕ್ಕ ಗಂಡ, ಸಂಸಾರದ ತೊಡಕುಗಳಿಂದ ಬಿಡಿಸಿಕೊಂಡು ದಿಟ್ಟ ನಡೆ ನಡೆದಾಗಲೂ ಅವಳಿಗೂ ಅನೇಕ ತೊಂದರೆಗಳು, ನಿಂದನೆಗಳು ಎದುರಾದವು. ಅಂತಹ ತೊಂದರೆಗಳನ್ನು ಧೈರ್ಯದಿಂದ ಹಿಮ್ಮೆಟ್ಟಿಸಿದರಿಂದಲೇ ತಾನು ಬಯಸಿದ ಚನ್ನಮಲ್ಲಿಕಾರ್ಜುನಲ್ಲಿ ಒಂದಾಗಲು ಸಾಧ್ಯವಾಯಿತು.

ಒಟ್ಟಿನಲ್ಲಿ ಸಮಾಜದ ವಿಚಾರದಲ್ಲಿ ಮಹಿಳೆಯು ಕೇವಲ ಕುಟುಂಬದ ಚಾಕರಿಯಲ್ಲಿರಬೇಕೆಂಬ ದೃಷ್ಟಿಯನ್ನು ಮುರಿದು ಕುಟುಂಬವು ಮನುಷ್ಯನ ಮೋಕ್ಷದ ಹಾದಿಯನ್ನು ಸುಗಮಗೊಳಿಸಬೇಕೆ ಹೊರತು ಕಂಟಕವಾಗಬಾರದು ಎಂಬ ಪಾರಮಾರ್ಥಿಕತೆಯನ್ನು ಸಾರುವ ವಿಚಾರಗಳು ವಚನಕಾರ್ತಿಯರಲ್ಲಿ ಕಾಣಸಿಗುತ್ತದೆ. ಅಕ್ಕನಂತೂ ಚನ್ನಮಲ್ಲಿಕಾರ್ಜುನನ್ನೇ ಗಂಡನೆಂದು ಸಾರಿ ಸಾರಿ ಹೇಳಿದಳು. ಭೂಲೋಕ, ಲೌಕಿಕ ಬದುಕಿನ ಜಂಜಾಟದ ಬಲೆಗೆ ಸಿಲುಕಿಕೊಂಡ ಗಂಡನನ್ನು ಸುಟ್ಟು ಹಾಕಿ ಎನ್ನುವುದರ ಜೊತೆಗೆ ಚನ್ನಮಲ್ಲಿಕಾರ್ಜುನನ ಹೊರತಾಗಿ ಉಳಿದ

ಗಂಡಸರು ಸಹೋದರರಂತೆ ಎನ್ನುವ ದೃಢ ಅಭಿಪ್ರಾಯವನ್ನು ದಾಖಲಿಸುತ್ತಾಳೆ.

**ಪರಾಮರ್ಶನ ಗ್ರಂಥಗಳು:**


1. ಕಲಬುರ್ಗಿ ಎಂ.ಎಂ. (ಪ್ರಧಾನ ಸಂಪಾದಕರು), (2001), ಸಮಗ್ರ ವಚನ ಸಂಪುಟ–05, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
2. ನಾರಾಯಣ ಪಿ.ವಿ., (2010), ವಚನ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ, ಮೈಸೂರು: ಗೀತಾ ಬುಕ್ ಹೌಸ್.
3. ಕಮಲಮ್ಮ ವಿ., (1997), ಹನ್ನೆರಡನೆಯ ಶತಮಾನದ ಕನ್ನಡ ವಚನ ಸಾಹಿತ್ಯದಲ್ಲಿ ಚಿತ್ರಿತವಾದ ಆದರ್ಶ ಕುಟುಂಬ ವ್ಯವಸ್ಥೆ, ಮೈಸೂರು: ಶ್ರೀಗಂಧ ಪ್ರಕಾಶನ.
4. ಅರವಿಂದ ಜತ್ತಿ (ಸಂಪಾದಕರು), (2025), ಬಸವ ಪಥ (ಸಂಪುಟ–46, ಸಂಚಿಕೆ–2), ಬೆಂಗಳೂರು: ಬಸವ ಸಮಿತಿ.
5. ಸವಿತಾ ರವಿಶಂಕರ್, (2021), ಸ್ತ್ರೀವಚನ ತಾತ್ವಿಕತೆ, ಮೈಸೂರು: ಶ್ರೀಕ್ಷೇತ್ರ ಪ್ರಕಾಶನ.
6. ಬಸವರಾಜ ಬಳಿಗಾರ, (2020), ಸಂತೆಯ ಚೆನ್ನ ಬೆಳಕು, ಗದಗ: ಲಡಾಯಿ ಪ್ರಕಾಶನ.